ಅಸಲು ದಾವೆ ನಂಃ 258/2020

ಪಿ.ಡಬ್ಲ್ಯೂಃ2–ಬಸವರಾಜ ಗೌಡನ್ನನವರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ24–04–2025 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ– ಶ್ರೀ.ವಿ. ಎಸ್ ಬಂಗಾರಿ ವಕೀಲರಿಂದ.**

ನಮ್ಮ ಮತ್ತು ಪ್ರತಿವಾದಿ ನಂ.1 ರಿಂದ 7 ರವರ ಮೂಲ ಪುರುಷ ಬಾಳಪ್ಪ ಎಂದರೆ ಸರಿ. ಸದರಿ ಬಾಳಪ್ಪ ಇವರಿಗೆ ಯಮನಪ್ಪ ಮತ್ತು ಬಸಪ್ಪ ಎನ್ನುವ ಇಬ್ಬರು ಮಕ್ಕಳಿರುತ್ತಾರೆ ಎಂದರೆ ಸರಿ. ಯಮನಪ್ಪನವರಿಗೆ ಬಸವ್ವ ಮತ್ತು ಇರಪ್ಪ ಎನ್ನುವ ಇಬ್ಬರು ಮಕ್ಕಳಿರುತ್ತಾರೆಂದರೆ ಸರಿ. ಇರಪ್ಪರವರು ಯಾವುದೇ ಮಕ್ಕಳಿಲ್ಲದೆ ಮೃತರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ಬಸವ್ವರವರ ಗಂಡ ಮಲ್ಲಪ್ಪ ಎಂದರೆ ಸರಿ. ಮಲ್ಲಪ್ಪ ಮತ್ತು ಬಸವ್ವ ಇವರಿಗೆ ಪ್ರತಿವಾದಿ ಸಂ.1 ರಿಂದ 7 ರವರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 ರಿಂದ 7 ರವರು ಎಲ್ಲಿ ವಾಸವಾಗಿರುತ್ತಾರೆಂದು ನನಗೆ ಗೊತ್ತಿಲ್ಲಾ.

ಬಾಳಪ್ಪನವರ 2 ನೇ ಮಗ ಬಸಪ್ಪ ಪೋತಿಯಾಗಿರುತ್ತಾರೆ ಎಂದರೆ ಸರಿ. ಬಸಪ್ಪ ರವರಿಗೆ ಅಂದಾನಪ್ಪ ಎನ್ನುವ ಮಗ ಇರುತ್ತಾನೆಂದರೆ ಸರಿ. ಅಂದಾನಪ್ಪ ನನ್ನ ತಂದೆ ಆಗಿರುತ್ತಾರೆ. ಸದರಿ ದಾವೆಯನ್ನು ಹೂಡಿದ ನಂತರ ನನ್ನ ತಂದೆಯವರು ಮೃತರಾಗಿರುತ್ತಾರೆ. ಸರ್ವೆ ನಂ.3/3 ವಿಪಿಸಿ ನಂ.654 ಮತ್ತು 646 ಆಸ್ತಿಗಳು ನಮ್ಮ ಮತ್ತು ಪ್ರತಿವಾದಿ ನಂ.1 ರಿಂದ 7 ರವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಬಾಳಪ್ಪರವರು ನಿಧನರಾದ ನಂತರ ಯಮನಪ್ಪ ಮತ್ತು ಬಸಪ್ಪ ರವರ ಹೆಸರು ಸದರಿ ಆಸ್ತಿಯಲ್ಲಿ ಇತ್ತು ಎಂದರೆ ಸರಿ ಅಲ್ಲ. ಬಾಳಪ್ಪರವರು ನಿಧನರಾದ ನಂತರ ನನ್ನ ತಂದೆಯವರ ಮತ್ತು ಯಮನಪ್ಪ ರವರ ಹೆಸರಿನಲ್ಲಿ ಆಸ್ತಿಗಳು ಜಂಟಿ ಖಾತೆಯನ್ನು ಹೊಂದಿರುತ್ತವೆಂದರೆ ಸರಿ ಅಲ್ಲ. ಬಾಳಪ್ಪರವರು ನಿಧನರಾದ ನಂತರ ನಮ್ಮ ತಂದೆ ಮತ್ತು ಯಮನಪ್ಪನವರು ಸದರಿ ಆಸ್ತಿಯ ಮಾಲೀಕರಾರಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿ ಅಲ್ಲ. ಬಸವ್ವರವರು ನಿಧನರಾದ ನಂತರ ಯಮನಪ್ಪನವರಿಗೆ ಯಾರು ವಾರಸುದಾರರು ಇಲ್ಲ ಎನ್ನುವ ಕಾರಣದಿಂದ ನನ್ನ ತಂದೆಯವರು ಸದರಿ ಆಸ್ತಿಯನ್ನು ನಕಲಿ ದಾಖಲಾತಿಗಳನ್ನು ಸೃಷ್ಠಿ ಮಾಡಿ ತನ್ನ ಹೆಸರಿಗೆ ಮಾಡಿಕೊಂಡಿರುತ್ತಾರೆಂದರೆ ಸರಿ ಅಲ್ಲ. ನನ್ನ ತಂದೆಯವರು ದಾವಾ ಆಸ್ತಿಗಳಲ್ಲಿ ತನ್ನ ಹೆಸರನ್ನು ನಕಲಿ ದಾಖಲಾತಿಗಳನ್ನು ಸೃಷ್ಠಿಮಾಡಿಕೊಂಡು ತನ್ನ ಹೆಸರನ್ನು ದಾಖಲಿಸಿಕೊಂಡಿರುತ್ತಾರೆಂದು 1 ರಿಂದ 7 ನೇ ಪ್ರತಿವಾದಿಗಳು ಉಪ ವಿಭಾಗಾಧಿಕಾರಿಗಳಿಗೆ

ಮೇಲ್ಮನವಿ ಮಾಡಿಕೊಂಡಿದ್ದರು ಎಂದರೆ ಸರಿ. ತಹಶೀಲ್ದಾರವರು ಮಾಡಿದ ಆದೇಶ ಸರಿ ಇರುವುದಿಲ್ಲ ಎಂದು ಉಪ ವಿಭಾಗಾಧಿಕಾರಿಗಳು ಆದೇಶ ಮಾಡಿ ಸದರಿ ಆಸ್ತಿಯಲ್ಲಿ ಪ್ರತಿವಾದಿ ನಂ.1 ರಿಂದ 7 ರವರ ಹೆಸರು ಸೇರಿಸಬೇಕೆಂದು ಆದೇಶಿಸಿರುತ್ತಾರೆಂದರೆ ಸರಿ ಅಲ್ಲ. ದಾವಾ ಆಸ್ತಿಯಲ್ಲಿ ನಮ್ಮ ತಂದೆ ಮತ್ತು 1 ರಿಂದ 7 ನೇ ಪ್ರತಿವಾದಿಗಳ ಹೆಸರು ಜಂಟಿಯಾಗಿ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು 1 ರಿಂದ 7 ನೇ ಪ್ರತಿವಾದಿಗಳು ಇತ್ತೀಚೆಗೆ ಅವರ ಹೆಸರುಗಳನ್ನು ಸೇರಿಸಿಕೊಂಡಿರುತ್ತಾರೆಂದು ನುಡಿದಿರುತ್ತಾರೆ. ಉಪ ವಿಭಾಗಾಧಿಕಾರಿಗಳು ಆದೇಶಿಸಿದಂತೆ 1 ರಿಂದ 7 ನೇ ಪ್ರತಿವಾದಿಯವರ ಹೆಸರು ದಾವಾ ಆಸ್ತಿಯ ದಾಖಲೆಯಲ್ಲಿ ಸೇರಿಸಲಾಗಿದೆಂದರೆ ಸರಿ ಅಲ್ಲ. ಸರ್ವೆ ನಂ.3/3 ರಲ್ಲಿ ಉತ್ತರದ ಅರ್ಧ ಭಾಗದಲ್ಲಿ 1 ರಿಂದ 7 ನೇ ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆಂದರೆ ಸರಿ ಅಲ್ಲ. ದಕ್ಷಿಣ ಧಿಕ್ಕಿನಲ್ಲಿ ನಾವು ಸ್ವಾಧೀನದಲ್ಲಿದ್ದೇವೆಂದರೆ ಸಾಕ್ಷಿಯು ಒಟ್ಟು ದಾವಾ ಆಸ್ತಿಯಲ್ಲಿ ನಾವು ಸ್ವಾಧೀನದಲ್ಲಿರುತ್ತೇವೆಂದು ನುಡಿದಿರತ್ತಾರೆ. ಹಾಗೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. 1 ರಿಂದ 7 ನೇ ಪ್ರತಿವಾದಿಯವರು ನಮ್ಮ ತಂದೆಗೆ ಮತ್ತು ನನಗೆ ಪಾಲು ವಿಭಾಗ ಮಾಡಿಕೊಡುವಂತೆ ಕೇಳಿಕೊಂಡು ಬಂದಿರುತ್ತಾರೆ ಎಂದರೆ ಸರಿ ಅಲ್ಲ. ಸಾಕ್ಷಿಯು ಮುಂದುವರೆದು ಅವರು ನನಗೆ ಪರಿಚಯ ಇರುವುದಿಲ್ಲವೆಂದು ನುಡಿದಿರುತ್ತಾರೆ. 1 ರಿಂದ 7 ನೇ ಪ್ರತಿವಾದಿಗಳು ನಮ್ಮ ತಂದೆಯ ವಿರುದ್ಧ ಪಾಲು ವಿಭಾಗ ಕೇಳಿ ದಾವಾ ಸಂ.215/2018 ನ್ನು ದಾಖಲು ಮಾಡಿದ್ದರು ಎಂದರೆ ಸರಿ ಅಲ್ಲ. ನನ್ನ ತಂದೆಯವರು ದಾವಾ ಸಂ.215/2018 ಚಾಲ್ತಿಯಲ್ಲಿರುವಾಗಲೇ ಮೃತರಾಗಿದ್ದರು ಎಂದರೆ ಸರಿ. ನನ್ನ ತಂದೆಯವರು ಮೃತರಾದ ನಂತರ ಸದರಿ ದಾವೆಯಲ್ಲಿ ನಾವು ಕಾನೂನುಬದ್ಧ ವಾರಸುದಾರರಾಗಿ ಸಿ ವಾಯ್ ಹುನಗುಂದ ವಕೀಲರನ್ನು ನೇಮಕ ಮಾಡಿರುತ್ತೇವೆಂದರೆ ಸರಿ ಅಲ್ಲ. ಹಾಗೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ.

ವಾದಿ ಅಶೋಕ ಡಂಬಳ ಎನ್ನುವವರು ದೂರದ ಸಂಬಂಧದಿಂದ ನನ್ನ ಮಾವನವರಾಗಿರುತ್ತಾರೆ. ಅವರು ಖಾಯಂ ಆಗಿ ಹುನಗುಂದದಲ್ಲಿ ವಾಸವಾಗಿರುತ್ತಾರೆ. ನಾವು ಮತ್ತು ವಾದಿಯವರು ಸೇರಿಕೊಂಡು ದಾವಾ ಆಸ್ತಿಯಲ್ಲಿ ಹೊಂದಿಕೊಂಡು ಉತ್ತರ

ಭಾಗದಲ್ಲಿರುವ ಆಸ್ತಿಯಲ್ಲಿ 1 ರಿಂದ 7 ನೇ ಪ್ರತಿವಾದಿಯವರು ಕಡ್ಲಿ ಬಿತ್ತಿದ್ದ ಜಮೀನಿನಲ್ಲಿ ಅತಿಕ್ರಮ ಪ್ರವೇಶ ಮಾಡಿರುತ್ತೇವೆಂದರೆ ಸರಿ ಅಲ್ಲ. ಸದರಿ ವಿಚಾರದ ಬಗ್ಗೆ 1 ರಿಂದ 7 ನೇ ಪ್ರತಿವಾದಿಗಳು ನರೇಗಲ್ ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದರು ಎಂದರೆ ಸರಿ. 1 ರಿಂದ 7 ನೇ ಪ್ರತಿವಾದಿಗಳು ಬೆಳೆದಿದ್ದ ಕಡ್ಲಿಯನ್ನು ನಾಶಪಡಿಸಲು ಟ್ರ್ಯಾಕ್ಟರನ್ನು ವಾದಿಯವರು ತೆಗೆದುಕೊಂಡು ಬಂದಿರುತ್ತಾರೆಂದರೆ ಸರಿ ಅಲ್ಲ. ಸದರಿ ಟ್ರ್ಯಾಕ್ಟರನ್ನು ನರೆಗಲ್ ಪೋಲಿಸ್ ಠಾಣೆಯವರು ಜಪ್ತು ಮಾಡಿದ್ದರಿಂದ ನ್ಯಾಯಾಲಯದ ಆದೇಶದ ಮೇರೆಗೆ ಬಿಡಿಸಿಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲಾ.

ನನ್ನ ತಂದೆಯವರು 1 ರಿಂದ 7 ನೇ ಪ್ರತಿವಾದಿಯವರಿಗೆ ತಿಳಿಯದಂತೆ ವಾದಿಯವರಿಗೆ ಸ್ವಾಧೀನವನ್ನು ನೀಡದೆ ನೋಂದಾಯಿತ ಖರೀದಿ ಪತ್ರವನ್ನು ಬರೆದುಕೊಟ್ಟಿರುತ್ತಾರೆಂದರೆ ಸರಿ ಅಲ್ಲ. ವಾದಿಯವರಿಗೆ ಆಸ್ತಿಯನ್ನು ಮಾರಾಟ ಮಾಡುವಾಗ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಮತ್ತು 1 ರಿಂದ 7 ನೇ ಪ್ರತಿವಾದಿಯವರಿಗೆ ಆಸ್ತಿಯನ್ನು ಕೊಡಬಾರದು ಎನ್ನುವ ಉದ್ದೇಶದಿಂದ ಸದರಿ ಖರೀದಿ ಪತ್ರವನ್ನು ಬರೆದುಕೊಟ್ಟಿರುತ್ತಾರೆಂದರೆ ಸರಿ ಅಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯವರು ತನ್ನ ಕಷ್ಟಕ್ಕೆ ಮನೆಯನ್ನು ಮತ್ತು ಹೊಲವನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಸರ್ವೆ ನಂ.3/3 ರಲ್ಲಿ ನಾವೇ ಸ್ವಾ ಧೀನದಲ್ಲಿರುತ್ತೇವೆ. ಸರ್ವೆ ನಂ.3/3 ರಲ್ಲಿ ನಾವು ಅರ್ಧ ಮತ್ತು 1 ರಿಂದ 7 ನೇ ಪ್ರತಿವಾದಿಗಳು ಅರ್ಧ ಸ್ವಾಧೀನದಲ್ಲಿತ್ತಾರೆಂದರೆ ಸರಿ ಅಲ್ಲ. ವಾದಿಯವರು ಜಕ್ಕಲಿ ಗ್ರಾಮಕ್ಕೆ ಬಂದಿರುವುದಿಲ್ಲಾ ಮತ್ತು ದಾವಾ ಆಸ್ತಿಯಲ್ಲಿ ಸ್ವಾ ಧೀನವನ್ನು ಹೊಂದಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಆಗಾಗ ಬಂದು ಹೋಗುತ್ತಿರುತ್ತಾರೆ ಮತ್ತು ಅವರೇ ಸ್ವಾಧೀನದಲ್ಲಿರುತ್ತಾರೆಂದು ನುಡಿದಿರುತ್ತಾರೆ. ವಾದಿಯವರು ಸ್ವಾ ಧೀನದಲ್ಲಿರುವ ಬಗ್ಗೆ ಖರೀದಿ ಕೊಟ್ಟಿರುವ ಖರೀದಿ ಕಾಗದ ಇರುತ್ತದೆ. ಖರೀದಿ ಆದಾಗಿನಿಂದ ಇಲ್ಲಿಯವರೆಗೂ ವಾದಿಯವರ ಹೆಸರು ಸದರಿ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿ ಅಲ್ಲ. 1 ರಿಂದ 7 ನೇ ಪ್ರತಿವಾದಿಗಳು ದಾವಾ ಸಂ.215/2018 ರಂತೆ ನನ್ನ ತಂದೆಯವರ ವಿರುದ್ಧ ದಾವೆಯನ್ನು ದಾಖಲು

ಮಾಡಿದ ಕಾರಣದಿಂದ ನಾವು ವಾದಿಯವರ ಜೊತೆಗೆ ಸೇರಿಕೊಂಡು ಸದರಿ ದಾವೆಯನ್ನು ದಾಖಲು ಮಾಡುವಂತೆ ಹೇಳಿರುತ್ತೇವೆಂದರೆ ಸರಿ ಅಲ್ಲ. ವಾದಿಯವರು ಖರೀದಿ ಪತ್ರದ ಆಧಾರದ ಮೇಲೆ ವಾದಿಯವರು ಸಂಪೂರ್ಣ ಮಾಲೀಕರಾಗಿರುವುದಿಲ್ಲ ಮತ್ತು ಸದರಿ ಆಸ್ತಿಯ ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿ ಅಲ್ಲ. ನಾವು ಮತ್ತು ವಾದಿಯವರು ಸೇರಿ 1 ರಿಂದ 7 ನೇ ಪ್ರತಿವಾದಿಯವರಿಗೆ ದಾವಾ ಆಸ್ತಿಯನ್ನು ಕೊಡಬಾರದು ಎನ್ನುವ ಉದ್ದೇಶದಿಂದ ಹೆಸರಿಗಷ್ಟೇ ಖರೀದಿ ಪತ್ರವನ್ನು ಬರೆಸಿರುತ್ತೇವೆಂದರೆ ಸರಿ ಅಲ್ಲ.

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ಮಾಹಿತಿಯನ್ನು ನಮ್ಮ ವಕೀಲರಿಗೆ ನಾನೇ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ 1 ರಿಂದ 7 ನೇ ಪ್ರತಿವಾದಿಯವರ ತಾಯಿಯ ಹೆಸರು ಸರ್ವೆ ನಂ.3/3 ರಲ್ಲಿ ನಮೂದಾಗಿತ್ತು ಎಂದು ಬರೆಸಿದ್ದೇವೆಂದರೆ ಸರಿ ಅಲ್ಲ. ಯಮನಪ್ಪನವರ ಮಗ ಇರಪ್ಪ ಯಾವುದೇ ವಾರಸುದಾರರು ಇಲ್ಲದೇ ಮರಣ ಹೊಂದಿರುತ್ತಾರೆಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ನಮ್ಮ ತಂದೆ ಮತ್ತು ಬಸವ್ವ ರವರ ನಡುವೆ ಮೌಖಿಕ ಪಾಲು ವಿಭಾಗವಾಗಿರುವ ವರ್ಷ ನನಗೆ ಗೊತ್ತಿರುವುದಿಲ್ಲ. ನಮ್ಮ ತಂದೆ ಮತ್ತು ಬಸವ್ವ ಇವರ ನಡುವೆ ಮೌಖಿಕ ಪಾಲು ವಿಭಾಗ ಅಂದಾಜು 70 ರಿಂದ 80 ವರ್ಷಗಳ ಹಿಂದೆ ಆಗಿರಬಹುದು. ಆಗ ನಾನು ಜನಿಸಿರಲಿಲ್ಲ. ಸದರಿ ಮೌಖಿಕ ಪಾಲು ವಿಭಾಗದ ಬಗ್ಗೆ ನನ್ನ ತಂದೆಯವರು ನನಗೆ ಹೇಳಿದ್ದರು ಆ ಸಂದರ್ಭದಲ್ಲಿ ನಮ್ಮ ತಂದೆ ಮತ್ತು ಬಸವ್ವರವರು ಇಬ್ಬರು ಮಾತ್ರ ಸೇರಿ ಮೌಖಿಕ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ. ನಮ್ಮ ಕಾನೂನುಬಾಹಿರ ಕೃತ್ಯಗಳನ್ನು ಮುಚ್ಚಿ ಹಾಕಲು ಮೌಖಿಕ ಪಾಲು ವಿಭಾಗವಾಗಿರುವ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಸರ್ವೆ ನಂ.3/3 ವಿಪಿಸಿ ಸಂ.654 ಮತ್ತು 646 ರ ನಡುವೆ ನಮ್ಮ ಮತ್ತು 1 ರಿಂದ 7 ನೇ ಪ್ರತಿವಾದಿಗಳ ನಡುವೆ ಪಾಲು ವಿಭಾಗ ಆಗಿರುವುದಿಲ್ಲ ಎಂದರೆ ಸರಿ ಅಲ್ಲ. ಸಾಕ್ಷಿಯು ಮುಂದುವರೆದು ಸದರಿ ಪಾಲು ವಿಭಾಗ ಆಗಿರುವುದರಿಂದಲೇ 1 ರಿಂದ 7 ನೇ ಪ್ರತಿವಾದಿಗಳ ಆಸ್ತಿಯನ್ನು ಮಾರಾಟ ಮಾಡಿಕೊಂಡಿರುತ್ತಾರೆಂದು ನುಡಿದಿರುತ್ತಾರೆ. ನಮ್ಮ ಮತ್ತು 1 ರಿಂದ 7 ನೇ ಪ್ರತಿವಾದಿಗಳ ನಡುವೆ ಪಾಲು ವಿಭಾಗ ಆಗಿರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ತಂದೆಯವರಿಗೆ ಸರ್ವೆ ನಂ.3/3 ನ್ನು ಮಾರಾಟ ಮಾಡುವ ಸಂಪೂರ್ಣ ಹಕ್ಕು ಇರಲಿಲ್ಲವೆಂದರೆ ಸರಿ ಅಲ್ಲ.

ವಿಪಿಸಿ ಸಂ.646 ನ್ನು ನಮ್ಮ ತಂದೆ ಮತ್ತು ಬಸವ್ವ ರವರು ಮಾರಾಟ ಮಾಡಿ ಅದರಿಂದ ಬಂದ ಹಣವನ್ನು ಒಟ್ಟು ಕುಟುಂಬದ ಖರ್ಚಿಗೆ ಬಳಸಿಕೊಂಡಿರುತ್ತೇವೆಂದರೆ ಸರಿ ಅಲ್ಲ. ನಾನು ವಾದಿಯ ಪರವಾಗಿ ಸುಳ್ಳು ಪ್ರಮಾಣ ಪತ್ರವನ್ನು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

sd/-

(ವಿಜಯಕುಮಾರ ಎನ್)

ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.